NOVEMBER 02, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- **ನಾಡಿನಾದ್ಯಂತ, ಸಂಭ್ರಮದ,** 71ನೇ ಕನ್ನಡ ರಾಜ್ಯೋತ್ಸವ ಆಚರಣೆ; 'ಕರ್ನಾಟಕ' ನಾಮಕರಣದ, ಸ್ಮರಣೆ.
- **ಕನ್ನಡ ಬಾವುಟಕ್ಕೆ,** ನಾಡಧ್ವಜದ ಸ್ಥಾನಮಾನ; ಬೆಳಗಾವಿ ಅಧಿವೇಶನದಲ್ಲಿ ತೀರ್ಮಾನ – ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ.
- **ಬಿ.ಇ.ಎಂ.ಎಲ್. ನಲ್ಲಿ,** ಬಿ–28, ಪ್ರಥಮ, ಸ್ವದೇಶಿ ಬುಲೆಟ್ ರೈಲು, ನಿರ್ಮಾಣ.
- **ಧಾರವಾಡ ಐ.ಐ.ಟಿ.:** ಅಹೋರಾತ್ರಿ ಸಂಗೀತೋತ್ಸವ – **"ಯಾಮಿನಿ", ಯಶಸ್ವಿ.**

<><><>

ಈಗ ವಾರ್ತೆಗಳ ವಿವರ

<><><>

71ನೇ ಕರ್ನಾಟಕ ರಾಜ್ಯೋತ್ಸವವನ್ನು, ನಾಡ ಉತ್ಸವವಾಗಿ, ಅತ್ಯಂತ ವಿಜೃಂಭಣೆಯಿಂದ, ಅರ್ಥಪೂರ್ಣವಾಗಿ, ಜನೋತ್ಸವದ ಮಾದರಿಯಾಗಿ ಆಚರಿಸಿದ ವರದಿಗಳು ಬಂದಿವೆ. 200 ವ ರ್ಷಗಳ ಹಿಂದೆ, ಈಗಿನ ಕಿತ್ತೂರು ಕರ್ನಾಟಕವನ್ನು, ಬ್ರಿಟಿ ಶ್ ಈಸ್ಟ್ ಇಂಡಿಯಾ ಕಂಪೆನಿ ಸರಕಾರ, ಸದರ್ನ ಮಹಾರಾಷ್ಟ್ರ ಎಂದು ಕರೆಯುತ್ತಿತ್ತು. ಧಾರವಾಡದ ಹಲವಾರು ಕನ್ನಡ ಹೋರಾಟಗಾರರು, ಅಚ್ಚಗನ್ನಡದ ಪ್ರದೇಶಗಳನ್ನು ಕರ್ನಾಟಕ ಸೀಮೆ ಎಂದು ದಾಖಲಿಸುವಲ್ಲಿ ಮತ್ತು ಸಾರ್ವಜನಿಕವಾಗಿ ಕರ್ನಾಟಕ ಪದಪ್ರಯೋಗವನ್ನು ಸಾರ್ವತ್ರಿಕಗೊಳಿಸುವ ಪ್ರಯತ್ನಗಳನ್ನು, ಎಲ್ಲೆಡೆ ವ್ಯಾಪಕಗೊಳಿಸಿದರು.

<><><>

ಈ ಕುರಿತು ಒಂದು ವರದಿ..

<><><>

1973ರ ನವೆಂಬರ್ 1 ರಂದು, ಮೈಸೂರು ರಾಜ್ಯ, 'ಕರ್ನಾಟಕ' ಎಂದು ಮರುನಾಮಕರಣಗೊಂಡಿತು. ಧಾರವಾಡದ ಕನ್ನಡ ಹೋರಾಟಗಾರರು, ತಮ್ಮ ವೈಯಕ್ತಿಕ ಹೆಸರಿನಲ್ಲಿ ಸಂಘ – ಸಂಸ್ಥೆಗಳನ್ನು ಸ್ಥಾಪಿಸದೇ, ಎಲ್ಲಾ ಸಂದರ್ಭಗಳಲ್ಲಿ ಮತ್ತು ಕ್ಷೇತ್ರಗಳಲ್ಲಿ ರೂಪಿಸಿದ ಸಂಸ್ಥೆಗಳು, "ಕರ್ನಾಟಕ" ಎಂಬ, ಒಂದೇ ಸಾರ್ವತ್ರಿಕ, ಧ್ವನಿಪೂರ್ಣ ಹೆಸರಿನಲ್ಲಿ ಮುನ್ನಡೆಸಲು ಸಂಕಲ್ಪಿಸಿದ್ದು, ಮಾದರಿ. ಧಾರವಾಡವನ್ನು ತಮ್ಮ ಹೋರಾಟದ ಕೇಂದ್ರವಾಗಿಸಿದ್ದ, ಬಹುಪಾಲು ಕನ್ನಡಪರ ಹೋರಾಟಗಾರರು, ದೂರದೃಷ್ಟಿಯಿಂದ, "ಕರ್ನಾಟಕ" ಎಂಬ ಪದಪ್ರಯೋಗವನ್ನು, ಎರಡು ಶತಮಾನಗಳ ಹಿಂದೆಯೇ ಬಳಸಿ, ನಾಡಿಗೆ ಅಸ್ಥಿವಾರ ರೂಪಿಸಿದ್ದು, ಮನನೀಯ. ಕನ್ನಡ ಪತ್ರಿಕೋದ್ಯಮದ, ಹಿರಿಯ ನಿಯತಕಾಲಿಕ, "ಜೀವನ ಶಿಕ್ಷಣ" ಮಾಸಪತ್ರಿಕೆಯ ವಿಶ್ರಾಂತ ಸಂಪಾದಕ, ಗುರುಮೂರ್ತಿ ಯರಗಂಬಳಿಮಠ, ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ವಿವೇಕ (49) + ಗುರುಮೂರ್ತಿ ಯರಗಂಬಳಿಮಠ ಧ್ವನಿ (65) ಸೆಕೆಂದುಗಳು

<><><>

ಕನ್ನಡ ಬಾವುಟಕ್ಕೆ, ಅಧಿಕೃತ ನಾಡಧ್ವಜದ ಸ್ಥಾನಮಾನ ನೀಡಲು, ಸರ್ಕಾರ ಚಿಂತನೆ ನಡೆಸಿದೆ; ಬೆಳಗಾವಿ ಅಧಿವೇಶನದಲ್ಲಿ ಚರ್ಚಿಸಲಾಗುವುದು ಎಂದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ತಿಳಿಸಿದ್ದಾರೆ. ಬೆಂಗಳೂರಿನ, ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ, 71ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ, ಧ್ವಜಾರೋಹಣ ನೆರವೇರಿಸಿ, ಮಾತನಾಡಿದರು. ಮುಂದಿನ ಒಂದು ವ ರ್ಷದ ಅವಧಿಯಲ್ಲಿ, ವಿವಿಧ ಕಾರ್ಯಕ್ರಮಗಳ ಮೂಲಕ, ಕನ್ನಡದ ಹಿರಿಮೆ ಸಾರಲು, ಸರ್ಕಾರ ಸಿದ್ಧತೆ ಮಾಡಿಕೊಂಡಿದೆ. ಎಲ್ಲ ಸರ್ಕಾರಿ ಕಚೇರಿ, ಸಂಸ್ಥೆ ಹಾಗೂ ಖಾಸಗಿ ಸಂಸ್ಥೆಗಳೂ, ಕನ್ನಡ ಧ್ವಜ ಹಾರಿಸುವಂತೆ, ಈ ತಿಂಗಳಲ್ಲೇ ಆದೇಶಿಸಲಾಗುವುದು, ಎಂದರು.

<><><>

ದೇಶದ ಮೊದಲ, ಸ್ವದೇಶಿ ಬುಲೆಟ್ ರೈಲು, ಬೆಂಗಳೂರಿನಲ್ಲಿ ರೂಪುಗೊಳ್ಳುತ್ತಿದೆ. ಬೆಂಗಳೂರಿನ, ಭಾರತ ಅರ್ಥ್ ಮೂವರ್ಸ್ ಲಿಮಿಟೆಡ್ – ಬಿ.ಇ.ಎಂ.ಎಲ್ ಕಾರ್ಯಾಗಾರದಲ್ಲಿ, ಚನ್ನೈನ ಐ.ಸಿ.ಎಫ್ – ರೈಲು ಕೋಚ್ ಫ್ಯಾಕ್ಟರಿ ಸಹಯೋಗದಡಿ, ನಿರ್ಮಾಣ ಕಾರ್ಯ ಭರದಿಂದ ಸಾಗಿದೆ. ರೇಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ, ಬೆಂಗಳೂರಿನ ಬಿ.ಇ.ಎಂ.ಎಲ್. ನ ಆದಿತ್ಯ ಉತ್ಪಾದನಾ ಘಟಕದಲ್ಲಿ, ಬಿ–28 ಹೆಸರಿನ ಬುಲೆಟ್ ರೈಲು ಉತ್ಪಾದನಾ ಕಾರ್ಯ ಪರಿಶೀಲಿಸಿದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ, ವರ್ಣರಂಜಿತ ಸಮಾರಂಭದಲ್ಲಿ, ಹಾವೇರಿ ಜಿಲ್ಲೆ, ರಾಣೆಬೆನ್ನೂರಿನ, ಕನ್ನಡ ನುಡಿ ಸೇವಕ ಹಾಗೂ ಕುಪ್ಪೇಲೂರು ಗ್ರಾಮದ ಪ್ರಗತಿಪರ ಕೃಷಿಕ, ವಾಸಪ್ಪ ಯಲ್ಲಪ್ಪ ಕುಸಗೂರ, ಪ್ರಸಕ್ತ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಂದ, ಸ್ವೀಕರಿಸಿದರು. ಪ್ರದೇಶ ಸಮಾಚಾರಕ್ಕಾಗಿ, ವಾಸಪ್ಪ ಕುಸಗೂರ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ವಾಸಪ್ಪ ಕುಸಗೂರ ಧ್ವನಿ 29 ಸೆಕೆಂದುಗಳು

<><><>

ಧಾರವಾಡದ, ಭಾರತೀಯ ತಂತ್ರಜ್ಞಾನ ಸಂಸ್ಥೆ – ಐ.ಐ.ಟಿ., 'ಸ್ಪಿಕ್ ಮೆಕೆ' ಸಹಯೋಗದಲ್ಲಿ, 71ನೇ ಕನ್ನಡ ರಾಜ್ಯೋತ್ಸವ ಹಾಗೂ ಸರ್ದಾರ ಪಟೇಲರ, 151ನೇ ಜಯಂತ್ಯುತ್ಸವದ ಸಂದರ್ಭದಲ್ಲಿ, ಪ್ರಥಮ ಬಾರಿಗೆ ಆಯೋಜಿಸಿದ್ದ, ಅಹೋರಾತ್ರಿ ಸಂಗೀತ ಕಾರ್ಯಕ್ರಮ, **"ಯಾಮಿನಿ"**, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಾಸಕ್ತರಿಗೆ ರಸದೌತಣವಾಗಿತ್ತು. ವಿಶ್ವ ಖ್ಯಾತಿಯ, ಸಂಗೀತಜ್ಞರು ಪಾಲ್ಗೊಂಡು, ಸಂಗೀತ ಕಛೇರಿ ನಡೆಸಿದ್ದು, ವಿಶೇಷ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಐ.ಐ.ಟಿ.ಯ ವಿದ್ಯಾರ್ಥಿ ಕಲ್ಯಾಣ ವಿಭಾಗದ ಸಹ ವಿದ್ಯಾಧಿಕಾರಿ, ಪ್ರೊಫೆಸರ್ ಸೂರ್ಯಪ್ರಕಾಶ ರಮೇಶ.

<><><>

ಪ್ರೊ. ಸೂರ್ಯಪ್ರಕಾಶ ರಮೇಶ ಧ್ವನಿ 45 ಸೆಕೆಂದುಗಳು

<><><>

ನಿಧನ ವಾರ್ತೆ

<><><>

ಹಿರಿಯ ಸಾಹಿತಿ, ಡಾಕ್ಟರ್ ಜಿನದತ್ತ ದೇಸಾಯಿ, ಬೆಳಗಾವಿಯಲ್ಲಿ ನಿಧನರಾಗಿದ್ದಾರೆ. ಅವರಿಗೆ 93 ವರ್ಷ ವಯಸ್ಸಾಗಿತ್ತು. ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದ, ದೇಸಾಯಿ ಅವರು, ಧಾರವಾಡ ಜಿಲ್ಲೆ, ಅಮ್ಮಿನಬಾವಿಯವರು. 1966 ರಿಂದ 1991 ರ ವರೆಗೆ ಬೆಳಗಾವಿಯಲ್ಲಿ ಜಿಲ್ಲಾ ನ್ಯಾಯಾಧೀಶರಾಗಿದ್ದರು. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಭೂಷಿತರಾಗಿದ್ದ, ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಬೆಳಗ್ಗೆ 11 ಗಂಟೆಗೆ, ಬೆಳಗಾವಿಯ ಸದಾಶಿವನಗರದ, ರುದ್ರಭೂಮಿಯಲ್ಲಿ ನಡೆಯಲಿದೆ.

<><><>

ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘದ, ಸಾಹಿತ್ಯ ಮತ್ತು ಅನುಭಾವ ಮಂಟಪ ಆಯೋಜಿಸಿದ್ದ, ಡಾಕ್ಟರ್ ಗೋಪಾಲ ದಾಬಡೆ ಮತ್ತು ಶಾರದಾ ಗೋಪಾಲ ಅವರು ಬರೆದ, **'ಗುಡ್ಡಗಾಡಿನ ಗಾಂಧಿ'** ಮತ್ತು **'ಶಿವಾಜಿ ಕಾಗಣಿಕರ–ಸರ್ವೋದಯ ಕೆಲಸಗಾರ'** ಎಂಬ ಕೃತಿಗಳನ್ನು, ಕಪ್ಪತಗುಡ್ಡದ ಡಾಕ್ಟರ್ ಶಿವಕುಮಾರ ಸ್ವಾಮೀಜಿ, ಬಿಡುಗಡೆ ಮಾಡಿದರು. ಡಾಕ್ಟರ್ ಶ್ರೀಧರ ಹೆಗಡೆ ಭದ್ರನ್ ಹಾಗೂ ಡಾಕ್ಟರ್ ಸಂಜೀವ ಕುಲಕರ್ಣಿ, ಕೃತಿ ಪರಿಚಯಿಸಿದರು. ಕಟ್ಟನ್ನಬಾವಿ ಹಾಗೂ ಗೋಖಾನಟ್ಟಿ ಗ್ರಾಮದ ಕಲಾವಿದರು, ಊರಿಗೆ ನೀರು ಬಂದ ಬಗ್ಗೆ, ಕಾಗಣಿಕರ ಅವರ ಕುರಿತ ನಾಟಕ ಪ್ರಸ್ತುತಪಡಿಸಿದರು.

<><><>

"ಕರ್ನಾಟಕ ರಾಜ್ಯೋತ್ಸವ, ಪಕ್ಷಿಗಣತಿ 2026" ಅಂಗವಾಗಿ, ಬೀದರ ನಂದಿನಗರದ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ, ಅರಣ್ಯ ಇಲಾಖೆಯ ಸಹಯೋಗದಲ್ಲಿ, 70ಕ್ಕೂ ಹೆಚ್ಚು ಶಾಲಾ ವಿದ್ಯಾರ್ಥಿಗಳು, ಪಕ್ಷಿ ವೀಕ್ಷಣೆ ಹಾಗೂ ದಾಖಲೀಕರಣ, ಕೈಗೊಂಡರು. ಪಕ್ಷಿ ಮಿತ್ರರಾದ, ಸಂಗ್ರಾಮ ಪಾಟೀಲ, ವಿವೇಕಾನಂದ ಬಿರಾದಾರ, ಪಕ್ಷಿ ವೀಕ್ಷಣೆಯ ಮಾರ್ಗದರ್ಶಿಗಳಾಗಿದ್ದರು. ಇಂದು, ಕನ್ನಡ ರಾಜ್ಯೋತ್ಸವ ಪಕ್ಷಿ ಗಣತಿ, ರಾಜ್ಯ ಅಭಿಯಾನ, ಮುಕ್ತಾಯಗೊಳ್ಳಲಿದೆ.

<><><>

ಪತ್ರಕರ್ತರ ಮೇಲಿನ ಅಪರಾಧಗಳಲ್ಲಿ, ಶಿಕ್ಷೆ ಖಾತ್ರಿ ಪಡಿಸುವ ಹಾಗೂ ಶಿಕ್ಷೆಯಿಂದ ನುಣುಚಿಕೊಳ್ಳುವ ಪ್ರವೃತ್ತಿ ಕೊನೆಗೊಳಿಸುವ, ಅಂತಾರಾಷ್ಟ್ರೀಯ ದಿನವಿಂದು. ವಿಶ್ವಸಂಸ್ಥೆಯ ಸಾಮಾನ್ಯ ಸಭೆ, 2013 ರಲ್ಲಿ ಈ ದಿನಾಚರಣೆಗೆ ಚಾಲನೆ ನೀಡಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- **ನಾಡಿನಾದ್ಯಂತ, ಸಂಭ್ರಮದ,** 71ನೇ ಕನ್ನಡ ರಾಜ್ಯೋತ್ಸವ ಆಚರಣೆ; **'ಕರ್ನಾಟಕ'** ನಾಮಕರಣದ, ಸ್ಮರಣೆ.
- **ಕನ್ನಡ ಬಾವುಟಕ್ಕೆ,** ನಾಡಧ್ವಜದ ಸ್ಥಾನಮಾನ; ಬೆಳಗಾವಿ ಅಧಿವೇಶನದಲ್ಲಿ ತೀರ್ಮಾನ – ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ.
- **ಬಿ.ಇ.ಎಂ.ಎಲ್. ನಲ್ಲಿ,** ಬಿ–28, ಪ್ರಥಮ, ಸ್ವದೇಶಿ ಬುಲೆಟ್ ರೈಲು, ನಿರ್ಮಾಣ.
- **ಧಾರವಾಡ ಐ.ಐ.ಟಿ.:** ಅಹೋರಾತ್ರಿ ಸಂಗೀತೋತ್ಸವ – **"ಯಾಮಿನಿ", ಯಶಸ್ವಿ.**

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>